ದಿನಾಂಕ 25.09.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲು ಃ ಶ್ರೀ ಆರ್.ಎಸ್ ವಕೀಲರಿಂದಃ**

೫. ಸರ್ವೆ ನಂಬರ್ ೭೬/೨ ಮತ್ತು ೩ ರಲ್ಲಿ ೫ ಹೆಚ್.ಬಿ ಮೋಟಾರ್, ಬಾವಿ, ದಾರಿ ಕಾಲುವೆ ಹಕ್ಕು ಸಹ ೩ನೇ ಪ್ರತಿವಾದಿಗೆ ಸೇರಿದೆ ಎಂದರೆ ಸರಿಯಲ್ಲ. ನನ್ನ ಅಜ್ಜ-ಅಜ್ಜಿಯ ಪೋಷಣೆಗಾಗಿ ೧ ಪಲ್ಲ ರಾಗಿ ಮತ್ತು ಪ್ರತಿಯೊಬ್ಬರೂ ೨೦೦/- ರೂ.ಗಳನ್ನು ನೀಡುವಂತೆ ಸಹ ಪಾರಿಕತ್ತಿನಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ.

೬. ೪ ನೇ ಪ್ರತಿವಾದಿಯ ಗಂಡ ಪಡಿತರ ಡಿಪೋ ಅಂಗಡಿ ನಡೆಸುತ್ತಿದ್ದರು ಎಂದರೆ ಸರಿ. ಅವರು ಗುತ್ತಿಗೆ ಕೆಲಸಗಳನ್ನು ಸಹ ಮಾಡುತ್ತಿದ್ದರು ಎಂದರೆ ಸರಿ. ಅವರು ಕೋಳಿ ಫಾರಂ ಸಹ ಹೊಂದಿದ್ದರು ಎಂದರೆ ಸರಿ. ೪ನೇ ಪ್ರತಿವಾದಿ ಈಗಲೂ ಸಹ ಹೂವು, ತರಕಾರಿ ವ್ಯಾಪಾರ ಮುಂದುವರೆಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ೪ನೇ ಪ್ರತಿವಾದಿಯ ಗಂಡ ತನ್ನ ಸ್ವಂತ ಆದಾಯದಿಂದ ಯಲಿಯೂರು ಗೇಟ್ ಬಳಿ ಇರುವ ನಿವೇಶನ ಸಂಖ್ಯೆ ೧೪ ರಲ್ಲಿ ೨ ಅಂತಸ್ತಿನ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಎಲ್ಲರೂ ಸೇರಿ ಕಟ್ಟಿಸಿದ್ದೇವೆ ಎನ್ನುತ್ತಾರೆ. ಸದರಿ ಮನೆ ನಿರ್ಮಾಣಕ್ಕೆ ಸುಮಾರು ೩೦ ಲಕ್ಷ ಹಣ ವೆಚ್ಚ ಆಗಿರಬಹುದು. ಸದರಿ ಸ್ವತ್ತನ್ನು ದಾವೆಯಲ್ಲಿ ಸೇರಿಸಿದ್ದೇವೆ. ಸದರಿ ಮನೆ ಆ ಕಾಲಕ್ಕೆ ಸುಮಾರು ೬೦ ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ.

೭. ದಾವಾ ಐಟಂ ೧೯ ಆನಂದಪ್ಪ ಎನ್ನುವವರಿಗೆ ಸೇರಿದ್ದು ಎಂದರೆ ಅದನ್ನು ಸಹ ಖರೀದಿಸಿದ್ದು, ಮುಂದೆ ಏನಾಯಿತು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಐಟಂ ೭ ರ ಪಶ್ಚಿಮಕ್ಕೆ ವಾದಿಯ ಜಮೀನು ಎಂದು ಬರೆಸಿರುವ ಸ್ವತ್ತು ಯಾವುದು ಎಂದರೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ ೮ ರ ದಕ್ಷಿಣಕ್ಕೆ ವಾದಿಯ ಉಳಿಕೆ ಜಮೀನು ಎಂದು ಬರೆಸಿರುವ ಸ್ವತ್ತು ಯಾವುದು ಎಂದರೆ ನನಗೆ ಗೊತ್ತಿಲ್ಲ. ಐಟಂ ನಂ ೯ ರ ಉತ್ತರಕ್ಕೆ ವಾದಿಯ ಉಳಿಕೆ ಜಮೀನು ಎಂದು ಬರೆಸಿರುವ ಸ್ವತ್ತು ಯಾವುದು ಎಂದರೆ ನನಗೆ ಗೊತ್ತಿಲ್ಲ. ೧೯೯೦ ನೇ ಸಾಲಿನ ಪಾರಿಕತ್ತಿನ ಸಮಯದಲ್ಲಿ ದಾವಾ ಐಟಂ ೨ ರಿಂದ ೫, ೧೦, ಯಲಿಯೂರು ಗ್ರಾಮದ ಮನೆ,

ಸರ್ವೆ ನಂ ೮೧/೩ ಮಾತ್ರ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿ ಆಗಿತ್ತು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ ೬, ೭ ಮತ್ತು ೯ನ್ನು ೪ನೇ ಪ್ರತಿವಾದಿಯ ಗಂಡ ಸ್ವಯಾರ್ಜಿತವಾಗಿ ಗಳಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಐಟಂ ೧೨ ನ್ನು ೨ ಮತ್ತು ೩ನೇ ಪ್ರತಿವಾದಿಗಳ ಹಿಸ್ಸೆಗೆ ಹೋಗಿದ್ದು, ೨ನೇ ಪ್ರತಿವಾದಿ ೩ನೇ ಪ್ರತಿವಾದಿಯ ಒಪ್ಪಿಗೆ ಮೇರೆಗೆ ಮನೆ ಕಟ್ಟಿ ಈಗಲೂ ಸಹ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಮನೆ ೨ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

೮. ದಾವಾ ಐಟಂ ನಂಬರ್ ೧೩ ನನ್ನ ತಾತನ ಹೆಸರಿಗೆ ಮಂಜೂರಾಗಿತ್ತು ಎಂದರೆ ಸರಿ. ದಾವಾ ಐಟಂ ನಂಬರ್ ೧೪, ೧೭ ಮತ್ತು ೧೮, ೪ನೇ ಪ್ರತಿವಾದಿಯ ಗಂಡನ ಸ್ವಯಾರ್ಜಿತ ಎಂದರೆ ಸರಿಯಲ್ಲ. ದಾವಾ ಐಟಂ ೧೫ ಮತ್ತು ೧೬ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಯಲಿಯೂರು ಗ್ರಾಮದ ಸರ್ವೆ ನಂಬರ್ ೨೮೨/೨ ರಲ್ಲಿ ೧ ಎಕರೆ ೨೦ ಗುಂಟೆಯನ್ನು ನಾವು ಮತ್ತು ೨ನೇ ಪ್ರತಿವಾದಿ ತಲಾ ಅರ್ಧ ಭಾಗದಲ್ಲಿ ಬಗರ್ ಹುಕುಂ ನಂತೆ ಸ್ವಾಧೀನ ಹೊಂದಿದ್ದೇವೆ ಎಂದರೆ ಸರಿ. ೨ನೇ ಪ್ರತಿವಾದಿ ತನ್ನ ಸ್ವಾಧೀನದ ಜಮೀನಿನಲ್ಲಿ ಅಡಿಕೆ, ತೆಂಗು ಹಾಕಿ ಬೋರ್‌ವೆಲ್ ಅಳವಡಿಸಿದ್ದಾರೆ ಎಂದರೆ ಸರಿ. ನಮ್ಮ ಸ್ವಾಧೀನದ ಜಮೀನಿನಲ್ಲಿ ೨ ರಿಂದ ೩ ತೆಂಗಿನ ಮರಗಳಿವೆ. ದಾವಾ ಐಟಂ ೫ ನ್ನು ನನ್ನ ಅಜ್ಜಿ ತೀರಿಕೊಂಡ ನಂತರ ೩ ರಿಂದ ೫ನೇ ಪ್ರತಿವಾದಿಗಳ ಹಿಸ್ಸೆಗೆ ನೀಡತಕ್ಕದ್ದು ಎಂದು ಪಾರಿಕತ್ತಿನಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ೫ ಹಿಸ್ಸೆ ಮಾಡುವಂತೆ ನನ್ನ ತಂದೆ ತಕರಾರು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನನ್ನ ತಾತ-ಅಜ್ಜಿಯ ಜೀವನಾಂಶಕ್ಕೆ ಬಿಟ್ಟಿದ್ದರು ಎಂದರೆ ಒಟ್ಟು ಕುಟುಂಬದಲ್ಲಿ ಅನುಭವಿಸುತ್ತಿದ್ದರು ಎನ್ನುತ್ತಾರೆ. ದಾವೆ ಹೂಡಲು ವಾಜ್ಯ ಕಾರಣ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಸಂಗತಿಗಳ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಸಾಕ್ಷಿ ನುಡಿಯಲು ಹಾಜರಾದಲ್ಲಿ ಪಾರಿಕತ್ತಿನ ಸತ್ಯಾಂಶ ತಿಳಿಯುತ್ತದೆ ಎಂದು ಆತನ ಬದಲಾಗಿ ನಾನು ಹಾಜರಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಈ ಮೊದಲು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತಿದ್ದು, ವಿಚಾರಣೆಗೆ ಹಾಜರಾದಲ್ಲಿ ಆತನ ನಿಜ ಸಹಿಯ ವಿಷಯ ಬಹಿರಂಗವಾಗುತ್ತದೆ ಎಂದು ತಿಳಿದು ಉದ್ದೇಶಪೂರ್ವಕವಾಗಿ

ಸಾಕ್ಷಿಗೆ ಹಾಜರಾಗಿಲ್ಲ ಎಂದರೆ ಸರಿಯಲ್ಲ. ಈಗ ಜಮೀನುಗಳ ಬೆಲೆ ಹೆಚ್ಚಾಗಿರುವ ಕಾರಣ ಅಕ್ರಮವಾಗಿ ಲಾಭ ಹೊಂದಲು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.